# ಮಲ್ಮಲ್ ಸೀರೆ ಕಮಾಲ್

ಮಲ್ಮಲ್ ಸೀರೆ ಫ್ಯಾಷನ್ ಜಗತ್ತಿನಲ್ಲಿ ಸದ್ದು ಮಾಡುತ್ತಿದೆ. ಇದರಲ್ಲಿ ಹ್ಯಾಂಡ್‌ಮೇಡ್ ಚಿತ್ತಾರದವೂ ಲಭ್ಯ. ವಿವಿಧ ಬಣ್ಣಗಳಲ್ಲಿ ತಯಾರಿಸಿದ ಕಸೂತಿ ನೋಡಲೂ ಆಕರ್ಷಕವಾಗಿರುತ್ತದೆ. ಹಬ್ಬದ ಸಂದರ್ಭದಲ್ಲಿ ಮಲ್ಮಲ್ ಸೀರೆಗಳು ಸಖತ್ ಲುಕ್ ಕೊಡುತ್ತವೆ.

■ ಯು. ಅನಂತ್

ದಸರಾ, ದೀಪಾವಳಿ ಹಬ್ಬಕ್ಕೆ ರೇಷ್ಮೆ ಸೀರೆಯ ಸಂಗ್ರಹ ಎಷ್ಟಿದ್ದರೂ ಸಾಲದು. ನವರಾತ್ರಿಗೆ ನವರಂಗಿನ ಸೀರೆಗಳು ಬೇಕು. ಬಣ್ಣಗಳಿಗೆ ಅನುಗುಣವಾಗಿ ದಿನವೂ ಉಟ್ಟುಕೊಳ್ಳಲು ರೇಷ್ಮೆ ಸೀರೆಗಳಿದ್ದರೇ ಚೆನ್ನ, ಹಬ್ಬ ಎಂದಾದ ಮೇಲೆ ಫ್ಯಾಷನಬಲ್ ಆಗಿರುವ ರೇಷ್ಮೆ ಸೀರೆಗಳತ್ತಲೇ ಮಹಿಳೆಯರ ಒಲವು.

ದೊಡ್ಡ ಬಾರ್ಡರ್ ಇರುವ ಕಾಂಜೀವರಂ, ಬನಾರಸ್ ಸೀರೆ ಉಟ್ಟುಕೊಂಡರೆ ಅದು ಮದುವೆ ಮನೆಯ ಕಳೆಕಟ್ಟುತ್ತದೆ. ಹಬ್ಬದ ಕಳೆ ಇದಕ್ಕಿಂತ ಭಿನ್ನ, ಹೀಗಾಗಿ ಲೈಟ್‌ವೈಟ್ ಸೀರೆ, ಹಗುರವಾದ ಸಣ್ಣ ಬಾರ್ಡರ್ ಇರುವ ಆದರೆ ಹೆಚ್ಚು ಗೆಟಪ್ ಆಗಿರುವ ಸೀರೆಗಳಿಗೇ ಆದ್ಯತೆ. ಇಂಥ ಮನೋಭಾವದ ಮಹಿಳೆಯರ ಮನದಿಂಗಿತ ಅರಿತ ಸೀರೆ ವರ್ತಕರು, ಫ್ಯಾಷನ್ ಡಿಸೈನರ್‌ಗಳು ಹೊಸ ಮಾದರಿಯ, ನವನವೀನ ವಿನ್ಯಾಸದ ಮಲ್ಮಲ್ ಸೀರೆಗಳನ್ನು ಮಾರುಕಟ್ಟೆಗೆ ತಂದಿದ್ದು, ಫ್ಯಾಷನ್ ಟ್ರೆಂಡ್ ಎನಿಸಿದೆ.

ಇದರಲ್ಲೂ ಹಸುರು ಬಣ್ಣದ ಮಲ್ಮಲ್ ಸೀರೆ ನೋಟಕ್ಕೂ ತಂಪು, ಉಡಲೂ ಸೇಫ್. ಪ್ರಕೃತಿಯ ಹಸುರು ವರ್ಣದ ಜೊತೆಗೆ ರೇಷ್ಮೆ ಸೀರೆಯ ಬಣ್ಣವೂ ಮಿಳಿತಗೊಂಡಾಗ ಅಲ್ಲಿ ಹೊಸ ಕಳೆಯೇ ಸೃಷ್ಟಿಯಾಗುತ್ತದೆ. ಹಬ್ಬದ ಸಂಭ್ರಮವನ್ನು ಇಮ್ಮಡಿಸಲು ಮಲ್ಮಲ್ ಸೀರೆಗಳು ಸಹಕಾರಿಯಾಗಿವೆ.

ಮಲ್ಮಲ್ ರೇಷ್ಮೆ ಸೀರೆ ಉತ್ತಮ ಗುಣಮಟ್ಟದವೇ ಆಗಿರುತ್ತವೆ, ಸಾಫ್ಟ್ ಮಲ್ಮಲ್ ಸೀರೆ ಅಪ್ಪಟ ರೇಷ್ಮೆಯಿಂದಲೇ ತಯಾರಾದವು. ಇಂತಹ ಸೀರೆಗಳನ್ನು ಮಿನುಗುವ ಹರಳು ಮತ್ತು ಚಮ್ಕಿಗಳಿಂದ ವಿಶಿಷ್ಟವಾಗಿ ಅಲಂಕರಿಸಿ ನೇಯ್ದರೆ ಮತ್ತು ಸೀರೆಯ ಮೇಲೆ ಹೂವಿನ ಕಸೂತಿಯನ್ನೂ ಅಳವಡಿಸಿದರೆ ಸಖತ್ ಲುಕ್ ಕೊಡುತ್ತದೆ.

ಈ ಸೀರೆಗಳಲ್ಲಿ ಹ್ಯಾಂಡ್‌ಮೇಡ್ ಚಿತ್ತಾರದವೂ ಲಭ್ಯ. ವಿವಿಧ ಬಣ್ಣಗಳಲ್ಲಿ ತಯಾರಿಸಿದ ಕಸೂತಿ ನೋಡಲೂ ಆಕರ್ಷಕವಾಗಿರುತ್ತದೆ.

### ಕಾಟನ್‌ನಲ್ಲೂ ಮಲ್ಮಲ್

ಹತ್ತಿಯಿಂದಲೂ ಮೃದುವಾದ, ಹಗುರವಾದ ಮಲ್ಮಲ್ ಸೀರೆ ತಯಾರಿಸಬಹುದು. ಇದು ಬಿಸಿ ಮತ್ತು ಆರ್ದ್ರ ವಾತಾವರಣವಿದ್ದಾಗ ತೊಟ್ಟುಕೊಳ್ಳಲು ಸೂಕ್ತ. ಮಲ್ಮಲ್ ಸೀರೆಗಳು ಜವಳಿ ಉದ್ಯಮಕ್ಕೆ ಹೆಸರಾದ ಪಶ್ಚಿಮ ಬಂಗಾಳ ಮತ್ತು ಉತ್ತರ ಪ್ರದೇಶಗಳಲ್ಲಿ ಜನಪ್ರಿಯವಾಗಿವೆ. ಅಲ್ಲದೆ ಈ ಸೀರೆ ಬಾಂಗ್ಲಾ ದೇಶದ ಢಾಕಾದಿಂದ ಹುಟ್ಟಿಕೊಂಡಿದೆ ಮತ್ತು ಮೊಘಲ್ ಯುಗದಲ್ಲಿ ಪ್ರಸಿದ್ಧವಾಗಿದೆ.

ಮಲ್ಮಲ್ ಎಂಬುದು ಪರ್ಷಿಯನ್ ಮೂಲದ ಪದ 'ಮಲ್' ಎಂಬ ಶಬ್ದದಿಂದ ಬಂದಿದೆ. ಇದರರ್ಥ ಮೆತ್ತಗೆ ಅಥವಾ ಮೃದು ಎಂಬುದು. ಶತಮಾನಗಳಿಂದ ಮಲ್ಮಲ್ ಬಟ್ಟೆ

